# ತುಳು ನಾಟಕ ಆಧಾರಿತ ಚಲನಚಿತ್ರಗಳು: ಪ್ರೇರಣೆ ಮತ್ತು ಅನನ್ಯತೆ

ಕೇಶವ ಬಂಗೇರ ಬಿ.[1] & ಧನಂಜಯ ಕುಂಬ್ಳೆ[2]

[1]ಸಂಶೋಧನಾ ವಿದ್ಯಾರ್ಥಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

[2]ಸಹಾಯಕ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ,
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

DOI: https://doi.org/10.5281/zenodo.15123892

## ABSTRACT:

ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ತುಳು ಅತೀ ಪ್ರಾಚೀನ ಭಾಷೆ. ವರ್ತಮಾನದಲ್ಲಿ ವಿಶ್ಲೇಷಣೆ ಮಾಡಿದರೆ ತುಳು ಹೊರತಾಗಿ ಇತರ ನಾಲ್ಕು ದ್ರಾವಿಡ ಭಾಷೆಗಳಾದ ಕನ್ನಡ, ಮಲೆಯಾಳಂ, ತಮಿಳು ತೆಲುಗು ಭಾಷೆಗಳು ತಮ್ಮ ವ್ಯಾಪ್ತಿಯ ರಾಜ್ಯವನ್ನೇ ಹೊಂದಿವೆ. ಆದರೆ ತುಳು ಭಾಷೆಯು ಕನ್ನಡ ಭಾಷೆಯೊಂದಿಗೆ ಸೌಹಾರ್ದವಾಗಿದ್ದು ಆತ್ಮೀಯವಾಗಿದೆ. ಇತಿಹಾಸಕಾಲದ ತುಳುನಾಡಿನ ವಿಸ್ತಾರ ಕಾಲಕ್ರಮೇಣ ಕುಂದುತ್ತಾ ಬಂತು. ಈಗ ತುಳುನಾಡೆಂದರೆ ದಕ್ಷಿಣಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳೆಂದು ತಿಳಿಯಬಹುದು. ಈ ಭಾಗದಲ್ಲಿ ಭಾಷೆ, ಸಂಸ್ಕೃತಿ, ಉಡುಗೆ ತೊಡುಗೆ, ಹಬ್ಬ ಹರಿದಿನಗಳು, ತಿಂಡಿ–ತಿನಿಸುಗಳು ಕೌಟುಂಬಿಕ ಪದ್ಧತಿ, ಕೃಷಿ ಚಟುವಟಿಕೆಗಳು ಎಲ್ಲವೂ ಪರಂಪರೆಯೊಂದಿಗೆ ಸಾಗಿಬಂದಿದೆ. ಸಹಸ್ರಾರು ವರ್ಷಗಳಿಂದ ಪರಂಪರೆ, ಸಂಪ್ರದಾಯ ತಲೆಮಾರುಗಳೊಂದಿಗೆ ಅಂತರ್ಗತವಾಗಿದೆ. ಆಧುನಿಕತೆಯ ಪ್ರಭಾವಕ್ಕೊಳಗಾದರೂ ಸಂಪ್ರದಾಯದ ನೆಲೆಗಟ್ಟು ಭದ್ರವಾಗಿದೆ.

## KEYWORDS:

ತುಳುನಾಟಕಗಳು, ತುಳು ಸಿನಿಮಾಗಳು, ಪ್ರೇರಣೆ, ಅನನ್ಯತೆ, ಕಥಾ ಸಂವಿಧಾನ, ಗೀತ ಸಾಹಿತ್ಯ, ಭಾಷಿಕ ಸ್ವರೂಪ.

ತುಳು ಲಿಪಿಯನ್ನು ಹೊಂದಿದ ಶ್ರೀಮಂತ ಭಾಷೆ. 'ಶ್ರೀ ಭಾಗವತೋ', 'ತುಳು ದೇವಿಮಹಾತ್ಮೆ', 'ಕಾವೇರಿ', ಅರುಣಾಬ್ಜ ಕವಿಯ ತುಳು 'ಮಹಾಭಾರತ', 'ಸಿರಿ ಪಾಡ್ದನ' ತುಳುವಿನ ಶ್ರೀಮಂತ ಸಾಹಿತ್ಯ ಪರಂಪರೆಯ ವೈಶಿಷ್ಟಗಳು. ತುಳುವನ್ನು ಮಾತೃಭಾಷೆಯಾಗಿ ಸ್ವೀಕರಿಸಿರುವ ತುಳು ಜನಾಂಗ ವಿಶ್ವದಾದ್ಯಂತ ಹಬ್ಬಿದೆ. ತುಳು ಭಾಷಿಗರು ತಮ್ಮ ವಿಶಿಷ್ಟ ಸಂಸ್ಕೃತಿಯ ಪ್ರತೀಕವಾಗಿದ್ದಾರೆ. ಇಂದು ಕರಾವಳಿ ಕರ್ನಾಟಕವನ್ನು ಕೇಂದ್ರವಾಗಿರಿಸಿಕೊಂಡು ತುಳುವರು ತಮ್ಮ ವೈಶಿಷ್ಟ ಪೂರ್ಣ ಸಂಸ್ಕೃತಿಗಾಗಿ ಹೆಸರುವಾಸಿ. ತಮ್ಮ ಭಾಷೆ ವೇಷ–ಭೂಷಣ, ಪಾಕಪ್ರಾವಿಣ್ಯ, ಧಾರ್ಮಿಕ ಸಹಿಷ್ಣುತೆ, ಜೀವನ ಶೈಲಿ, ಉದ್ಯಮ ಎಲ್ಲದರಲ್ಲೂ ವಿಶಿಷ್ಟತೆಯನ್ನು ಕಾಯ್ದುಕೊಂಡಿದ್ದಾರೆ.

ತಮ್ಮ ಸಂಸ್ಕೃತಿಯ ಮೂಲಕ ಪ್ರಕೃತಿಯೊಂದಿಗೆ ಧರ್ಮ, ಸಂಸ್ಕೃತಿ, ಮನೋರಂಜನೆಯನ್ನು ಮಿಳಿತಗೊಳಿಸಿರುವ ತುಳುವರ ಪ್ರಜ್ಞೆ ಅವರ ದೂರ ದೃಷ್ಟಿಯ ಪ್ರತೀಕ, ಬಹುಪಾಲು ತುಳುವರು ಪಾಲಿಸಿಕೊಂಡು ಬಂದಿರುವ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇಲ್ಲಿನ ಸಮಾಜದಲ್ಲಿ ಮಹಿಳೆಯರಿಗೆ ನೀಡಿರುವ ಉನ್ನತ ಸ್ಥಾನಕ್ಕೆ ಸಾಕ್ಷಿಯಾಗಿದೆ. ಹೀಗೆ ಅಗಾಧವಾದ ಹಿನ್ನಲೆ ಪರಂಪರೆಯನ್ನು ಹೊಂದಿರುವ ತುಳುವರು ಇಂದಿನ ಜಾಗತೀಕರಣದ ಪ್ರಭಾವಕ್ಕೆ ಒಳಗಾದರೂ, ಸಮೃದ್ಧವಾದ ತುಳು ಜಾನಪದ, ಸಂಸ್ಕೃತಿ, ಸಾಹಿತ್ಯಗಳಿಗೆ ಯಾವುದೇ ರೀತಿಯ ತೊಡಕನ್ನು ಉಂಟುಮಾಡಿದವರಲ್ಲ.

ಸಮೃದ್ಧವಾದ ಮತ್ತು ಸುದೀರ್ಘವಾದ ರಂಗಭೂಮಿಯ ಪರಂಪರೆಯನ್ನು ತುಳು ಭಾಷೆ ಹೊಂದಿದೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಮುಂತಾದ ಹೊಸ ಅಲೆಯ ನಾಟಕಗಳು, ಕಲಾವಿದರು ತುಳು ರಂಗಭೂಮಿಯನ್ನು ಸಂಪನ್ನಗೊಳಿಸಿದ್ದಾರೆ. ನಾಟಕಗಳು ದೇಶ-ವಿದೇಶಗಳಲ್ಲಿ ಪ್ರದರ್ಶನಗೊಂಡು ಜನಪ್ರಿಯವಾಗುತ್ತಿವೆ. ತುಳುನಾಡಿನ ತುಳುವ ಸಂಸ್ಕೃತಿಯಲ್ಲಿ ದೈವಾರಾಧನೆ ಅಥವಾ ಭೂತಾರಾಧನೆ ಪ್ರಾಚೀನಕಾಲದಿಂದ ಆರಾಧನ ಪರಂಪರೆಯಾಗಿ ಬೆಳೆದು ಬಂದಿದೆ.

ತುಳುನಾಡಿನಲ್ಲಿ ಜನನ ಮರಣ ಜೀವನಾವರ್ತಕ ಸಂದರ್ಭಗಳಲ್ಲಿ ಪೂಜಾ ನೃತ್ಯವೇ ಆರಂಭಿಕ ರಂಗ ಭೂಮಿಯಾಗಿತ್ತು. ಮುಂದೆ ದೀರ್ಘಾವಧಿಗಳಲ್ಲಿ ಹಂತ ಹಂತದ ವಿಸ್ತಾರ, ಸಮೃದ್ಧಿಗಳಾಗಿ ರಂಗ ಭೂಮಿ ಎನ್ನುವುದು ಇಂದಿನ ಹಂತಕ್ಕೆ ತಲುಪಿದೆ ಎನ್ನಲಾಗಿದೆ.

'ಚಲನಚಿತ್ರ' ಎನ್ನುವುದು ಸಮಷ್ಟಿ ಕಲೆ. ಈ ಕಾರಣದಿಂದ ಸಿನಿಮಾಗಳಲ್ಲಿ ವಿವಿಧ ನೆಲೆಯಲ್ಲಿ ಪ್ರಾದೇಶಿಕ ಸಂಸ್ಕೃತಿ ಅಭಿವ್ಯಕ್ತಿಗೊಂಡಿರುವುದನ್ನು ಗುರುತಿಸಲು ಸಾಧ್ಯವಿದೆ. ಸಿನಿಮಾದ ಶೀರ್ಷಿಕೆ. ಕಥೆ, ಸಂಭಾಷಣೆ, ಹಾಡು, ಸಂಗೀತ, ನೃತ್ಯ, ವಸ್ತು, ಕಲಾ ನಿರ್ದೇಶನ, ಬದುಕಿಗೆ ಸಂಬಂಧಿಸಿದ ಆಚರಣೆಗಳು, ಆಹಾರ, ಊಟೋಪಚಾರದ ಸಂದರ್ಭ, ಸನ್ನಿವೇಶ ನಿರ್ಮಾಣ ಇತ್ಯಾದಿ ವಿಚಾರಗಳನ್ನು ಗುರುತಿಸಲಾಗಿದೆ.

ಈ ಲೇಖನದಲ್ಲಿ ತುಳು ಭಾಷೆಯಲ್ಲಿ ಪ್ರದರ್ಶನಗೊಂಡು ನಂತರದಲ್ಲಿ ಚಲನಚಿತ್ರವಾಗಿ ತೆರೆಕಂಡ ಆಯ್ದ ನಾಟಕಗಳ ಆಶಯ ಮತ್ತು ಅನನ್ಯತೆ ಚರ್ಚಿಸಲಾಗಿದೆ.

ತುಳು ಸಿನಿಮಾಕ್ಷೇತ್ರದಲ್ಲಿ ಐತಿಹಾಸಿಕ ಗುರುತನ್ನು ಸ್ಥಾಪಿಸಿದ ತುಳುಭಾಷೆಯ ಮೊದಲ ಚಲನಚಿತ್ರ 'ಎನ್ನ ತಂಗಡಿ'(ನನ್ನ ತಂಗಿ). 1971ರಲ್ಲಿ ಬಿಡುಗಡೆಗೊಂಡ ಈ ಸಿನಿಮಾ ತುಳುಭಾಷೆಯಲ್ಲಿ ಪ್ರದರ್ಶನಗೊಂಡ ಕೆ. ಬಿ ಭಂಡಾರಿ ಅವರ 'ಮೆಗ್ಯೆ

ಪಲಯೆ'(ತಮ್ಮ ಅಣ್ಣ ) ನಾಟಕದ ಕಥೆಯನ್ನು ಆಧರಿಸಿದೆ.

ಚಲನಚಿತ್ರದ 'ಎನ್ನ ತಂಗಡಿ' ಶೀರ್ಷಿಕೆಯಿಂದ ಗುರುತಿಸಿಕೊಳ್ಳುವ ಕಾರಣ ತುಳುನಾಡಿನಲ್ಲಿ 'ಅಳಿಯ ಸಂತಾನ' ಪದ್ಧತಿಯನ್ನು ಪಾಲಿಸುವುದರಿಂದ ಇಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಪ್ರಾಧಾನ್ಯತೆಯನ್ನು ನೀಡಲಾಗಿದೆ.

ಕೆ. ಎನ್. ಟೇಲರ್ ಅವರ 'ಬಡಾಯಿದ ಬಂಗಾರ್'(ಬಾಡಿಗೆಯ ಚಿನ್ನ) ಎಂಬ ತುಳು ನಾಟಕದ ಕಥೆ 'ಬಿಸತ್ತಿ ಬಾಬು' (ಚೂರಿ ಬಾಬು) (1972) ಎಂಬ ಹೆಸರಿನಲ್ಲಿ ತೆರೆಕಂಡಿದೆ. ಈ ಚಿತ್ರ 1972–73ರ ಕರ್ನಾಟಕ ರಾಜ್ಯದ 3ನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದ ಮೊದಲ ತುಳು ಚಲನಚಿತ್ರವಾಗಿದೆ.

'ಉಡಲ್ದ ತುಡರ್'(ಒಡಲಿನ ದೀಪ)(1973) ಸಿನಿಮಾದ ಚಿತ್ರಕಥೆ ಎಮ್. ಕೆ. ಸೀತಾರಾಮ ಕುಲಾಲರ 'ಸತ್ಯೊನೆ ದೇವೆರ್'(ಸತ್ಯವೇ ದೇವರು) ಎಂಬ ತುಳುಭಾಷೆಯ ನಾಟಕದಿಂದ ಪ್ರೇರಣೆ ಪಡೆದಿದೆ.

ಪಶು ಸಂಗೋಪನೆ, ಭತ್ತ ಮತ್ತು ಅಡಿಕೆ ಕೃಷಿ ಮುಂತಾದ ತುಳುನಾಡಿನ ಪಾರಂಪರಿಕ ವ್ಯವಸಾಯವನ್ನು ತೆರೆಗೆ ಪರಿಚಯಿಸಿದ ಕೀರ್ತಿ ಈ ಸಿನಿಮಾಕ್ಕೆ ಸಲ್ಲುತ್ತದೆ.

ಮಲಯಾಳಂ ಭಾಷೆಯ ನಿರ್ದೇಶಕರಾದ ಪದ್ಮನಾಭ ಇವರಿಂದ ನಿರ್ದೇಶನಗೊಂಡ ಈ ಚಿತ್ರ ಪ್ರೀತಿ ಹಾಗು ತ್ಯಾಗದ ಕಥೆಯನ್ನು ಒಳಗೊಂಡಿದೆ.

ಶೈಕ್ಷಣಿಕ ಮತ್ತು ಜಾನಪದ ವಲಯದಲ್ಲಿ ಗುರುತಿಸಿಕೊಂಡ ತುಳುನಾಡಿನ ವಿದ್ವಾಂಸರಾದ ಅಮೃತ ಸೋಮೇಶ್ವರ ಮತ್ತು ವಿವೇಕ ರೈ ಹಾಗೂ ತುಳು ಸಾಹಿತ್ಯ ಬರಹಗಾರರಾದ ವಿಶು ಕುಮಾರ ಈ ಮೂರೂ ಜನರು ರಚಿಸಿದ ಹಾಡುಗಳನ್ನು ಒಳಗೊಂಡಿರುವ ಸಿನಿಮಾ 'ಕೋಟಿ ಚೆನ್ನಯ'(1973).

ವಿವೇಕ ರೈಗಳು ಬರೆದ "ಎಕ್ಕ ಸಕ್ಕ ಎಕ್ಕ ಸಕ್ಕ ಎಕ್ಕ ಸಕ್ಕಲಾ....... ! ಅಕ್ಕಾ ಪಂಡ್ದ್ ಲೆಪ್ಪುನಕ್ಲ್ ಬತ್ತೆರಿತ್ತೆಲಾ"("ಎಕ್ಕ ಸಕ್ಕ ಎಕ್ಕ ಸಕ್ಕ ಎಕ್ಕ ಸಕ್ಕಲಾ.... !(ಒಂದೇ ಸವನೆ) ಅಕ್ಕಾ ಅಂತ ಕರೆಯುವವರು ಬಂದರೀಗಲೇ) ಎಂಬ ಈ ಸಿನಿಮಾದ ಹಾಡು ತುಳುನಾಡಿನ ಜನಮಾನಸದಲ್ಲಿ ಈಗಲೂ ಅಚ್ಚಳಿಯದೆ ಉಳಿದಿದೆ.

1963ರಲ್ಲಿ ವಿಶುಕುಮಾರ್ ಅವರು ತುಳುನಾಡಿನ ಅಮರ ವೀರರು, ಸಾಂಸ್ಕೃತಿಕ ನಾಯಕರು ಹಾಗೂ ಆಸ್ತಿಕ ತುಳುವರಿಂದ ಆರಾಧನೆಗೊಳ್ಳುತ್ತಿರುವ ಕಾರಣಿಕ ದೈವೀಪುರುಷರಾದ 'ಕೋಟಿ ಚೆನ್ನಯ' ಎಂಬ ಅವಳಿ ಜವಳಿ ಸಹೋದರರ ವಿರೋಚಿತ ಐತಿಹಾಸಿಕ ಸಾಹಸಗಾಥೆಯನ್ನು ಆಧರಿಸಿ ಬರೆದ 'ಕೋಟಿ ಚೆನ್ನಯ' ಎಂಬ ನಾಟಕ ಮುಂಬಯಿಯಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕವರ್ಗವನ್ನು ರಂಜಿಸಿತು.

ಮುಂದೆ ಇದೇ ಕತೆಯನ್ನು ಆಧರಿಸಿ ಅವರು ತುಳು ಸಿನಿಮಾ ಮಾಡಿದರು.

ತುಳು ಸಿನಿಮಾಗಳು ಕಥೆಗೆ ಪೂರಕವಾಗಿ ತುಳುನಾಡಿನ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸಿವೆ. 'ಕೋಟಿ ಚೆನ್ನಯ' ತುಳು ಚಲನಚಿತ್ರ ತುಳುನಾಡಿನ ಜನಪದ ವಸ್ತುವನ್ನು ಆಧರಿಸಿದ ಚಿತ್ರವಾಗಿರುವುದರಿಂದ ಅಂದಿನ ರಾಜರ ಆಳ್ವಿಕೆ ಹಾಗೂ ತುಳುನಾಡಿನ ಸಾಮಾಜಿಕ ವ್ಯವಸ್ಥೆಯ ಪ್ರತಿನಿಧೀಕರಣ ಈ ಸಿನಿಮಾದಲ್ಲಿದೆ.

'ಕೋಟಿ ಚೆನ್ನಯ' ಸಿನಿಮಾಕ್ಕೆ ತುಳುಭಾಷೆಯಲ್ಲಿ ಮೂಡಿಬಂದ ಮೊದಲ ಐತಿಹಾಸಿಕ ಚಲನಚಿತ್ರ ಎಂಬ ಬಿರುದು ಪ್ರಾಪ್ತವಾಗಿದೆ.

'ಯಾನ್ ಸನ್ಯಾಸಿ ಆಪೆ'(ನಾನು ಸನ್ಯಾಸಿಯಾಗುತ್ತೇನೆ)(1973) ಸಿನಿಮಾ ಕೆ. ಎನ್. ಟೇಲರ್‌ರಿಂದ ಚಿತ್ರಕಥೆ ಮತ್ತು ಸಂಭಾಷಣೆ ರೂಪುಗೊಂಡು ಕನ್ನಡಭಾಷೆಯ ಚಿತ್ರ ನಿರ್ದೇಶಕ ಗೀತಪ್ರಿಯ ಇವರು ನಿರ್ದೇಶಿಸಿದ್ದಾರೆ. ಈ ಸಿನಿಮಾಕ್ಕೆ ಇದೇ ಹೆಸರಿನ ತುಳುನಾಟಕ ಪ್ರೇರಣೆಯಾಗಿದೆ.

'ಕಾಸ್ ದಾಯೆ ಕಂಡನೆ' (ರೊಕ್ಕದವನೆ ಗಂಡ) ಕೆ. ಎನ್. ಟೇಲರ್ ಇವರಿಂದ ಚಿತ್ರಕಥೆ ಮತ್ತು ಗೀತೆಗ ಸಾರಥ್ಯದಲ್ಲಿ ಮೂಡಿಬಂದ ಈ ಸಿನಿಮಾ ಇದೇ ಹೆಸರಿನ ತುಳುನಾಟಕದ ಕಥೆಯನ್ನಾಧರಿಸಿದ ಸಿನಿಮಾವಾಗಿದೆ. ಗೀತಪ್ರಿಯ ಇವರ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದೆ.

ಕೆ. ಎನ್ ಟೇಲರರ ಚೊಚ್ಚಲ ನಿರ್ಮಾಣ ಮತ್ತು ನಿರ್ದೇಶನದಲ್ಲಿ ಮೂಡಿಬಂದ 'ಯೇರ್ ಮಲ್ತಿನ ತಪ್ಪು' (ಯಾರು ಮಾಡಿದ ತಪ್ಪು ) (1974) ಈ ತುಳು ಸಿನಿಮಾ ಇದೇ ಹೆಸರಿನ ತುಳುನಾಟಕದ ಕಥಾ ಸಂವಿಧಾನವನ್ನು ಹೊಂದಿದೆ. ಚಿತ್ರಕಥೆ, ಸಂಭಾಷಣೆ ಮತ್ತು ಗೀತ ಸಾಹಿತ್ಯ ಕೆ. ಎನ್. ಟೇಲರ್‌ರರಿಂದಲೇ ನಡೆದಿದೆ.

'ಬಯ್ಯಮಲ್ಲಿಗೆ' (ಸಂಜೆಮಲ್ಲಿಗೆ)(1974)ಸಿನಿಮಾ ಪಿ. ಸಂಜೀವ ದಂಡೆಕೇರಿಯವರ ಇದೇ ಹೆಸರಿನ ನಾಟಕದ ಕಥಾ ಸನ್ನಿವೇಶಗಳನ್ನು ಒಳಗೊಂಡಿದೆ.

ಏಕಕಾಲದಲ್ಲಿ ಎರಡು ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಮೊದಲ ತುಳು ಚಿತ್ರ ಎಂಬ ಕೀತಿಗೆ ಭಾಜನವಾದ ಈ ಸಿನಿಮಾ ಅಕ್ರಮ ಸಂಬಂಧ, ಆಸ್ತಿಯ ಒಡೆತನ, ಕೌಟುಂಬಿಕ ಕಲಹ, ಕಿರುಕುಳ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಪ್ರತಿನಿಧಿಸಿದೆ.

1968ರಲ್ಲಿ ಕೆ. ಎನ್ ಟೇಲರ್ ಇವರಿಂದ ರಚನೆಯಾದ 'ಕಲ್ಲ್‌ದ ದೇವೆರ್'(ಕಲ್ಲಿನ ದೇವರು) ನಾಟಕ 1976ರಲ್ಲಿ ಗೀತಪ್ರಿಯರ ನಿರ್ದೇಶನದಲ್ಲಿ 'ಸಾವಿರಡೊರ್ತಿ ಸಾವಿತ್ರಿ'(ಸಾವಿರದಲ್ಲಿ ಒಬ್ಬಳು ಸಾವಿತ್ರಿ) ಸಿನಿಮಾ ಆಗಿ ತೆರೆಕಂಡಿತು.

'ಸಿನೆಮಾ ಟ್ರೈಲರ್ ಪದ್ಧತಿಯನ್ನು ಮೊದಲಿಗೆ ತೋರಿಸಿದ ತುಳುವಿನ ಚಿತ್ರ'

ಎಂಬ ಮನ್ನಣೆಗೆ ಪಾತ್ರವಾದ ಈ ಸಿನಿಮಾ ಕೌಟುಂಬಿಕ ಕಥನವನ್ನು ಒಳಗೊಂಡಿದೆ.

ಪಿ. ಸಂಜೀವ ದಂಡೆಕೇರಿಯವರು ರಚಿಸಿದ 'ಗಂಗಾ ರಾಮ್' ನಾಟಕದ ಕಥೆಯ ಆಧಾರದಲ್ಲಿ ನಿರ್ಮಿತವಾದ ತುಳು ಸಿನಿಮಾ 'ಬೊಳ್ಳಿದೋಟ'(ಬೆಳ್ಳಿತೋಟ) (1977).

"ಬ್ರಹ್ಮನ ಬರವು ಮಾಂಜದೆ ಪೋವಾ"(ಬ್ರಹ್ಮನ ಬರಹ ಮಾಸಿ ಹೋಹುದೇ) ಎಂಬ ಹಾಡನ್ನು ಒಳಗೊಂಡಿರುವ ಈ ಸಿನಿಮಾಕ್ಕೆ ಕರ್ನಾಟಕ ಸರಕಾರದಿಂದ ಒಂದು ಲಕ್ಷ ಸಹಾಯಧನ ದೊರೆತಿದೆ. ಸರಕಾರದ ಆರ್ಥಿಕ ಮೊತ್ತದಿಂದ ನಿರ್ಮಾಣಗೊಂಡ ಮೊದಲ ತುಳು ಸಿನಿಮಾ ಎಂಬ ಬಿರುದು ಈ ಸಿನಿಮಾಕ್ಕೆ ಪ್ರಾಪ್ತವಾಗಿದೆ.

ಪಾರಂಪರಿಕ ಕೃಷಿಯ ಕಲಾತ್ಮಕ ಅಭಿವ್ಯಕ್ತಿಯ ಚಿತ್ರಣ 'ಬೊಳ್ಳಿದೋಟ' ಸಿನಿಮಾದಲ್ಲಿದೆ. ಕೃಷಿಯನ್ನು ನೆಚ್ಚಿಕೊಂಡು ಬದುಕುವ ಕುಟುಂಬದ ಕಥೆಯನ್ನು ಪ್ರತಿನಿಧಿಸಿದೆ. ಕೃಷಿ ಮಾಡುತ್ತ ನೆಮ್ಮದಿಯ ಬದುಕನ್ನು ಕಂಡುಕೊಂಡಿರುವ ಅವಿಭಕ್ತ ಕುಟುಂಬವನ್ನು ಇಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿ ಸಾಲಾಗಿ ಕೋಣಗಳನ್ನು ಬಳಸಿ ಗದ್ದೆ ಉಳುಮೆಯನ್ನು ಮಾಡುವುದು ಮತ್ತು ಹೆಂಗಸರು ನೇಜಿ ನಾಟಿ ಮಾಡುವ ದೃಶ್ಯಗಳಿವೆ.

1980ರಲ್ಲಿ 'ಕಂಡನೆ ಬುಡೆದಿ' (ಗಂಡ ಹೆಂಡತಿ) ಎಂಬ ನಾಟಕ ಬರೆದ ಕೆ. ಎನ್ ಟೇಲರ್ ಅವರು ಅದೇ ಕಥೆಯನ್ನು ಆಧರಿಸಿ 1981ರಲ್ಲಿ 'ಭಾಗ್ಯವಂತೆದಿ'(ಭಾಗ್ಯವಂತಳು) ಎಂಬ ಹೆಸರಿನಲ್ಲಿ ಚಲನಚಿತ್ರ ಮಾಡಿದ್ದಾರೆ.

ಸಂಪೂರ್ಣವಾಗಿ ಬೆಂಗಳೂರು ನಗರದಲ್ಲಿ ಚಿತ್ರೀಕರಣವಾದ ಮೊದಲ ತುಳು ಚಿತ್ರ ಇದಾಗಿದೆ. 1981–82ರ ಕರ್ನಾಟಕ ರಾಜ್ಯದ ವಿಶೇಷ ಪ್ರಶಸ್ತಿ ಈ ಚಿತ್ರಕ್ಕೆ ಲಭಿಸಿದೆ.

ಫೈಟ್ ಡೈರೆಕ್ಟರ್ ರಾಮ್ ಶೆಟ್ಟಿ ನಿರ್ದೇಶನ ಮಾಡಿರುವ ಮೊದಲ ತುಳು ಸಿನಿಮಾ 'ದಾರೆದ ಸೀರೆ'(ಧಾರೆಯ(ಮದುವೆ) ಸೀರೆ)(1984). ಈ ಸಿನಿಮಾಕ್ಕೆ ಸಂಭಾಷಣೆ ಮತ್ತು ಹಾಡುಗಳನ್ನು ಸಂಯೋಜಿಸಿದವರು ಮಚ್ಚೇಂದ್ರನಾಥ ಪಾಂಡೇಶ್ವರ. ಈ ಸಿನಿಮಾ ಇವರ 'ಪೊರ್ತುಕಂತ್‌ಂಡ್' ನಾಟಕದ ಕಥೆಯನ್ನು ಆಧರಿಸಿದೆ.

ಮಚ್ಚೇಂದ್ರನಾಥರು ತುಳು ಭಾಷೆಯಲ್ಲಿ 160ಕ್ಕಿಂತಲೂ ಅಧಿಕ ನಾಟಕಗಳನ್ನು ಬರೆದವರು. ಇವರ ನಾಟಕಗಳ ಕುರಿತು ಮುದ್ದು ಮೂಡುಬೆಳ್ಳೆ ಅವರು "ಪಾಂಡೇಶ್ವರ್ 60–70 ದಶಕಗಳಲ್ಲಿ ತಮ್ಮ ಬಹು ಸಂಖ್ಯೆಯ ನಾಟಕಗಳನ್ನು ರಚಿಸಿದರು. ಹೆಚ್ಚಿನ ನಾಟಕಗಳಲ್ಲಿ ನಿಗೂಢತೆ, ಹಾಸ್ಯ, ಸಾಮಾಜಿಕ ವಿಡಂಬನೆ, ಸ್ತ್ರೀಪರ ಚಿಂತನೆ, ಸಾಮರಸ್ಯ ಧೋರಣೆ, ಹಲವು ನಾಟಕಗಳಲ್ಲಿ ಅಜ್ಜಿಯೋರ್ವಳ ಪ್ರಮುಖ ಪಾತ್ರ,

ಸರಳ ಸಂಭಾಷಣೆ ಇವು ಮಚ್ಚೇಂದ್ರನಾಥರ ವೈಶಿಷ್ಟ್ಯ. 'ನಾಟಕದುಲಯಿ ನಾಟಕ' ತುಳು ನಾಟಕ ರಂಗದಲ್ಲಿ ಪ್ರಪ್ರಥಮ ಕ್ಯಾಸೆಟ್ ರೂಪದಲ್ಲಿ ಬಂತು. ಮಂಗಳೂರು ಆಕಾಶವಾಣಿಯ ಆರಂಭಕಾಲದಲ್ಲೇ ಇದರ ಬಾನುಲಿ ಪ್ರಸಾರ ನಡೆದಿತ್ತು. 160ಕ್ಕೂ ಮಿಕ್ಕು ನಾಟಕ ರಚನೆ ದಾಖಲೆ ಇವರದು. ಹಲವು ತುಳು ಚಿತ್ರಗಳಿಗೆ ಚಿತ್ರಕಥೆ, ಸಂಭಾಷಣೆ ರಚಿಸಿಕೊಟ್ಟವರು" ಎಂದು ಉಲ್ಲೇಖಿಸಿದ್ದಾರೆ. (ತುಳುನಾಟಕ ಪರಂಪರೆ; ಪು. 46)

ತುಳುನಾಡಿನ ಜನರು ಜಾಗತಿಕ ಮಟ್ಟಕ್ಕೆ ತೆರೆದುಕೊಂಡಂತೆ ತಮ್ಮ ಜೀವನಶೈಲಿಗಳಲ್ಲಿ ಬದಲಾವಣೆಯನ್ನು ಬಯಸತೊಡಗಿದರು. ಎಂಬತ್ತು ತೊಂಭತ್ತರ ದಶಕಗಳಲ್ಲಿ ಔದ್ಯೋಗಿಕವಾಗಿ ಸೌದಿ, ಮುಂಬಯಿಗಳಂತ ಮಹಾನಗರಗಳನ್ನು ಸೇರುವ ಧಾವಂತದಲ್ಲಿದ್ದರು. ಹಿರಿಯ ತಲೆಮಾರು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ತಮ್ಮ ಅಭಿರುಚಿಗೆ ಕಟ್ಟಿಬೆಳೆಸಿ ಮುನ್ನೆಲೆಗೆ ತಂದಿದ್ದರು. ಆದರೆ ಆ ದಶಕಗಳಲ್ಲಿ ಟಿ. ವಿ. ಮಾಧ್ಯಮದ ಪ್ರವೇಶ ತುಳು ನಾಟಕರಂಗವನ್ನು ಮಬ್ಬಾಗಿಸುವ ಹೊತ್ತಿಗೆ ರಂಗಭೂಮಿಯಲ್ಲಿ ತಮ್ಮನ್ನು ಅರ್ಪಿಸಿಕೊಂಡ ಓಟದ ಕುದುರೆಗಳೆರಡು ಧಾವಿಸಿ ಬಂದವು. ಅವರೇ 'ಬಲೇ ಚಾ ಪರ್ಕ'(ಬನ್ನಿ ಚಾ ಕುಡಿಯುವ)ದ ದೇವದಾಸ್ ಕಾಪಿಕಾಡ್ ಹಾಗೂ 'ಒಂಜಿ ನಿಮಿಷ'(ಒಂದು ನಿಮಿಷ)ದ ವಿಜಯಕುಮಾರ್ ಕೊಡಿಯಾಲ್‌ಬೈಲ್.

ದೇವದಾಸ್ ಕಾಪಿಕಾಡ್ ಅವರು ನಾಟಕ ತಂಡವನ್ನು ಕಟ್ಟಿಕೊಂಡು ಜನಸಾಮಾನ್ಯರ ನಿತ್ಯಜೀವನದ ಅಧ್ವಾನಗಳ ಹಾಸ್ಯ ಪ್ರಸಂಗಗಳನ್ನೇ ಸಂಭಾಷಣೆಯಾಗಿ ಪೋಣಿಸಿ ನಾಟಕರೂಪ ನೀಡುವ ತಂತ್ರಕ್ಕೆ ಮೊದಲು ಕೈಯಿಕ್ಕಿದವರು. ಅವರು 1986ರಲ್ಲಿ 'ಬಲೇ ಚಾ ಪರ್ಕ' ಎಂಬ ನಾಟಕವನ್ನು ಮಂಗಳೂರಿನ ಶಕ್ತಿನಗರದಲ್ಲಿ ಪ್ರಥಮ ಬಾರಿಗೆ ಪ್ರದರ್ಶಿಸಿ ಅಪಾರ ಪ್ರೇಕ್ಷಕರ ಮತ್ತು ನಾಟಕಭಿಮಾನಿಗಳ ಅಭಿನಂದನೆಗಳಿಗೆ ಪಾತ್ರರಾದರು. ಮುಂದೆ ಗಂಟೇತಾಂಡ್?(ಗಂಟೆಷ್ಟಾಯಿತು?) ಮತ್ತಿತರ ಪ್ರಹಸನ ಸ್ವರೂಪದ ನಾಟಕಗಳ ಮೂಲಕ ಪ್ರೇಕ್ಷಕರನ್ನು ಆಕರ್ಷಿಸಿ ನಿಮಿಷಕ್ಕೊಮ್ಮೆ ನಕ್ಕು ನಗಿಸಿ ಹಾಸ್ಯ ರಸದಿಂದ ಪುಳಕಿತರನ್ನಾಗಿಸಿತು.

ಇವರ 'ಬಲೇ ಚಾ ಪರ್ಕ' ನಾಟಕ 1991ರಲ್ಲಿ ಸತ್ಯ ಓಲುಂಡು.. ?(ಸತ್ಯ ಎಲ್ಲಿದೆ.. ?) ಎಂಬ ಹೆಸರಿನಲ್ಲಿ ಸಿನಿಮಾವಾಯಿತು. ಆರೂರು ಪಟ್ಟಾಭಿ ನಿರ್ದೇಶಕರಾಗಿದ್ದ ಈ ಸಿನಿಮಾಕ್ಕೆ, ದೇವದಾಸ್ ಕಾಪಿಕಾಡ್ ಚಿತ್ರಕಥೆ, ಸಂಭಾಷಣೆ ಹಾಗೂ ಗೀತ ಸಾಹಿತ್ಯವನ್ನು ರಚಿಸಿಕೊಟ್ಟಿದ್ದಾರೆ.

ಮೊದಲ ರಾಷ್ಟ್ರೀಯ ಪ್ರಾದೇಶಿಕ ಭಾಷಾ ಚಲನಚಿತ್ರ ಪ್ರಶಸ್ತಿ, ಪ್ರಥಮ ಸಿನಿಮಾಸ್ಕೋಪ್ ತುಳು ಚಿತ್ರ ಹಾಗೂ 1992–93ರ ಕರ್ನಾಟಕ ರಾಜ್ಯದ ವಿಶೇಷ

ಪ್ರಾಂತೀಯ ಭಾಷಾ ಪ್ರಶಸ್ತಿ ಹೀಗೆ ಮಹತ್ವದ ಮೂರು ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡ 'ಬಂಗಾರ್ ಪಟ್ಲೇರ್' (ಚಿನ್ನದಂತಹ ಪಟೇಲರು)(1993) ಸಿನಿಮಾ 'ಸತ್ಯ ಬತ್ತಲೆ' ಎಂಬ ನಾಟಕದ ಕಥೆಯನ್ನು ಆಧರಿಸಿದೆ.

ಈ ನಾಟಕದ ಕರ್ತೃ ಕೆ. ನಾರಾಯಣ ಶೆಟ್ಟಿ. ಆರ್. ಎನ್ ಮಿತ್ರಮಂಡಳಿ ಎಂಬ ನಾಟಕ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಮತ್ತು ಕರಾವಳಿಯಲ್ಲಿ ತುಳುರಂಗಭೂಮಿಯ ಚಟುವಟಿಕೆಗಳಿಗೆ ಸಂಪೂರ್ಣವಾಗಿ ತೊಡಗಿಸಿಕೊಂಡ ಮಹನೀಯರಲ್ಲಿ ಒಬ್ಬರು.

'ಪಟ್ಲೇರ್' ಎಂಬ ಪದ ತುಳುನಾಡಿನ ಜನರ ಆಡುಮಾತಿನ ನಡುವೆ ಬಳಕೆಯಾಗುತ್ತದೆ. ಈ ಸಿನಿಮಾದಲ್ಲಿ ಕರಾವಳಿಯಲ್ಲಿ ವಾಸವಿರುವ ಕೊಂಕಣಿ, ಕಾಮತ್, ಬ್ಯಾರಿ, ಮುಂತಾದ ಸಮುದಾಯಗಳ ಪ್ರತಿನಿಧೀಕರಣವಿದೆ. ತೌಳವನಾಡಿನ ಪೂರ್ಣ ಪ್ರಮಾಣದ ಪ್ರಾದೇಶಿಕತೆ ಈ ಸಿನಿಮಾದಲ್ಲಿದೆ.

ರಿಚರ್ಡ್ ಕ್ಯಾಸ್ಟಲಿನೊ ಅವರು ನಿರ್ಮಾಪಕರಾಗಿ, ನಿರ್ದೇಶಕರಾಗಿ, ಚಿತ್ರಕಥೆ ರಚನೆಕಾರರಾಗಿ ಗುರುತಿಸಿಕೊಂಡ ಈ ಸಿನಿಮಾದಲ್ಲಿ ವಾಮನ್ ರಾಜ್, ಸರೋಜಿನಿ ಶೆಟ್ಟಿ, ಕಾಸರಗೋಡು ಚಿನ್ನಾ, ಸುಧಾರಾಣಿ. ರಾಮಣ್ಣ ರೈ. ರಾಮದಾಸ್ ದೇವಾಡಿಗ, ರೋಹಿದಾಸ್ ಕದ್ರಿ, ಆರ್. ಕೆ. ಉಳ್ಳಾಲ, ತಮ್ಮಲಕ್ಷ್ಮಣ, ಪದ್ಮ ಮುಂತಾದವರು ನಟಿಸಿದ್ದಾರೆ.

1993ರಲ್ಲಿ ಈ ಸಿನಿಮಾ 57 ಹೌಸ್‌ಫುಲ್ ಮತ್ತು 105 ದಿನಗಳ ಪ್ರದರ್ಶನವನ್ನು ಕಂಡಿದೆ. ಜ್ಯೋತಿ ಟಾಕೀಸ್ ಒಂದರಲ್ಲೇ ನಾಲ್ಕು ಮತ್ತು ಆರು ರೂಪಾಯಿ ದರದ ಟಿಕೇಟ್ ಮಾರಾಟದಿಂದ ಸುಮಾರು ನಾಲ್ಕುಲಕ್ಷದ ಅರುವತ್ತೈದು ಸಾವಿರ ರೂಪಾಯಿ ಮೊತ್ತವನ್ನು ಗಳಿಸಿಕೊಂಡ ಹಗ್ಗಳಿಕೆ ಈ ಸಿನಿಮಾಕ್ಕಿದೆ.

ದೇವದಾಸ್ ಕಾಪಿಕಾಡ್ ಇವರ ಸಮಕಾಲೀನ ವ್ಯಕ್ತಿ ಮತ್ತು ತುಳು ಹಾಸ್ಯ ನಾಟಕಗಳ ರೂವಾರಿ ವಿಜಯಕುಮಾರ್ ಕೊಡಿಯಲ್‌ಬೈಲ್. ನಾಟಕ ಪ್ರದರ್ಶನದಲ್ಲಿ ಸದಾ ಹೊಸತನ ಮತ್ತು ಹೊಸ ಪ್ರಯೋಗಗಳನ್ನು ಮಾಡುತ್ತ ಹಾಸ್ಯ ನಾಟಕಗಳೊಂದಿಗೆ ಗಂಭೀರ ನಾಟಕಗಳನ್ನು ರಂಗಕ್ಕೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಅತ್ಯಾಧುನಿಕ ರಂಗ ವಿನ್ಯಾಸ, ತಾಂತ್ರಿಕತೆ ಮತ್ತು ಕ್ಷಿಪ್ರ ಪ್ರಾಯೋಗಿಕತೆಯತ್ತ ದೃಷ್ಟಿ ನೆಟ್ಟಿದ್ದ ಇವರು ಪ್ರತಿ ಪ್ರಯೋಗದಲ್ಲಿಯೂ ವೈವಿಧ್ಯತೆಯನ್ನು ತೋರಿಸಿ ಜನಮೆಚ್ಚುಗೆ ಗಳಿಸಿದ್ದಾರೆ.

ಸಮಾಜದ ಘಟನಾವಳಿಗಳತ್ತ ಸೂಕ್ಷ್ಮ ನೋಟ ಇರಿಸುತ್ತಾ, ನಾಟಕಗಳ ನಡುವೆಯೇ ಕೋಸ್ಟಲ್‌ವುಡ್ ಕರಾವಳಿ ತುಳು ಚಿತ್ರರಂಗದಲ್ಲಿ ಏನಾದರೂ ಬದಲಾವಣೆ ತರುವ ತುಡಿತದೊಂದಿಗೆ ತನ್ನ 'ಒಂಜಿ ನಿಮಿಷ'(ಒಂದು ನಿಮಿಷ) ಅ

ನಾಟಕವನ್ನು 'ಒಂತೆ ಅಡ್ಜಸ್ಟ್ ಮಲ್ಪಿ' (ಸ್ವಲ್ಪ ಅಡ್ಜಸ್ಟ್ ಮಾಡಿ) (1998) ಹೆಸರಿನಲ್ಲಿ ಸಿನೆಮಾ ಮಾಡಿ ಅದರಲ್ಲೂ ಭರ್ಜರಿ ಯಶಸ್ಸು ಗಳಿಸಿದ್ದಾರೆ. ನಿತ್ಯದ ಜಂಜಾಟಗಳಿಂದ ಹೊರಬಂದು, ಮೂರು ಗಂಟೆಳ ಕಾಲ ಎಡೆಬಿಡದೆ ಹೊಟ್ಟೆ ಹುಣ್ಣಾಗುವಂತೆ ನಗಿಸಬಲ್ಲ ಕೊಡಿಯಲ್ ಬೈಲ್ ಮತ್ತು ಕಾಪಿಕಾಡ್ ತಂಡಗಳ ಹಾಸ್ಯನಾಟಕ ಪ್ರದರ್ಶನಗಳಿಗೆ ಪ್ರೇಕ್ಷಕರು ಮುಗಿಬಿದ್ದು ನೋಡುವುದಿದೆ.

1997–98 ಕರ್ನಾಟಕ ರಾಜ್ಯ ಅತ್ಯುತ್ತಮ ಪ್ರಾದೇಶಿಕ ಭಾಷಾ ಪ್ರಶಸ್ತಿಯನ್ನು ಪಡೆದುಕೊಂಡ ಈ ಸಿನಿಮಾ ಜನಮೆಚ್ಚುಗೆಗೆ ಪಾತ್ರವಾಗಿದೆ.

ಈ ಸಿನಿಮಾದ ನಂತರ ಮತ್ತೆ ವಿಜಯಕುಮಾರ್ ಕೊಡಿಯಲ್‌ಬೈಲ್‌ರ ನೈಜ ಸಿನಿಮಾಗಾಥೆ ಆರಂಭಗೊಂಡದ್ದು 2011ರಲ್ಲಿ ಬಿಡುಗಡೆಗೊಂಡ 'ಒರಿಯದರ್ೊರಿ ಅಸಲ್'(ಒಬ್ಬನಿಗಿಂತ ಮತ್ತೊಬ್ಬ ಸೊಬಗ/ಮೇಲು) ಚಲನಚಿತ್ರದಿಂದ.

ತುಳುರಂಗಭೂಮಿಯಲ್ಲಿ ಮಹತ್ವದ ಸಂಚಲನವನ್ನು ತಂದ 'ಒರಿಯದರ್ೊರಿ ಅಸಲ್' ನಾಟಕದ ಕಥೆ ಮುಂದೆ ಅದೇ ಹೆಸರಿನಲ್ಲಿ ಸಿನಿಮಾವಾಗಿ ಬೆಳ್ಳಿತೆರೆಯಲ್ಲಿ ಅಭೂತಪೂರ್ವವಾದ ಯಶಸ್ವಿಗೆ ಕಾರಣವಾಯಿತು. ಈ ಸಿನಿಮಾದ ಪ್ರೇರಣೆಯಿಂದ ತುಳು ಸಿನಿಮಾಕ್ಷೇತ್ರ ತ್ವರಿತ ಬೆಳವಣಿಯನ್ನು ಕಾಣಲಾರಂಭಿಸಿತು.

4 ದೇಖಾವೆಯಲ್ಲಿ 175 ದಿನಗಳ ಕಾಲ ಪ್ರದರ್ಶನ ಕಂಡ ದಾಖಲೆ ಮಾಡಿದ ತುಳು ಚಿತ್ರ 'ಒರಿಯದರ್ೊರಿ ಅಸಲ್'.

ನಾಟಕ ರಚನೆ, ಚಿತ್ರಕಥೆ, ಸಂಭಾಷಣೆ, ಗೀತ ಸಾಹಿತ್ಯ, ಗೀತ ಗಾಯನ ಸಂಗೀತ, ಅಭಿನಯ, ನಿರ್ದೇಶನ ಹಾಗೂ ನಾಟಕ ತಂಡದ ನಾಯಕನಾಗಿ ಗುರುತಿಸಿಕೊಂಡ ದೇವದಾಸ್ ಕಾಪಿಕಾಡ್ ಇವರಿಗೆ ಅಭಿಮಾನಿಗಳು ನೀಡಿರುವ ಬಿರುದು 'ತೆಲಿಕೆದ ಬೊಳ್ಳಿ'(ನಗುವಿನ ಬೆಳ್ಳಿ ).

ಇವರ 'ಗಂಟೇತಾಂಡ್?'(ಗಂಟೆಷ್ಟಾಯಿತು?) ತುಳುನಾಟಕ 'ತೆಲಿಕೆದ ಬೊಳ್ಳಿ'(2012) ಎಂಬ ಹೆಸರಿನಲ್ಲಿ ಸಿನಿಮಾವಾಗಿ ತೆರೆಯಲ್ಲಿ ಹೊಸ ಸಂಚಲನವನ್ನು ಮೂಡಿಸಿತು.

ಚಿತ್ರಕಥೆ, ಸಂಭಾಷಣೆಗಳನ್ನು ಬರೆದ ದೇವದಾಸ್ ಕಾಪಿಕಾಡ್ ಅವರ ಧರ್ಮಪತ್ನಿ ಶರ್ಮಿಳಾ ಕಾಪಿಕಾಡ್ ಅವರು ಈ ಸಿನಿಮಾದ ನಿರ್ಮಾಪಕರಾಗಿದ್ದಾರೆ. ಕರ್ನಾಟಕದ ಖ್ಯಾತ ಸಂಗೀತಗಾರ ಗುರುಕಿರಣ್ ಅವರು ಹಿನ್ನೆಲೆ ಸಂಗೀತ ನೀಡಿದ್ದಾರೆ.

ಬೆಟ್ಟಂಪಾಡಿ ಗುತ್ತು ಮಾಗಣೆಯ ಊರಿನಲ್ಲಿ ನಡೆದ ಸತ್ಯ ಕಥೆ ಆಧಾರಿತ ನಾಟಕ 'ನೇಮೊದ ಬೂಳ್ಯ' (ನೇಮದ ಪ್ರಸಾದ– ದೈವಾರಾಧನೆಯಲ್ಲಿ ದೈವ ನೀಡುವ ಗಂಧ ಪ್ರಸಾದ) 2017ರಲ್ಲಿ ತುಳು ಸಿನಿಮಾವಾಗಿದೆ.

ತುಳು ಭಾಷೆಯ ಶ್ರೀಮಂತಿಕೆಯನ್ನು ಸಾಹಿತ್ಯ ಸೇರಿದಂತೆ ಉಳಿದೆಲ್ಲಾ ಕಲಾ ಪ್ರಕಾರಗಳಿಗಿಂತ ರಂಗಭೂಮಿ ಹಾಗೂ ಚಲನಚಿತ್ರ ಕ್ಷೇತ್ರಗಳು ಸಮರ್ಥವಾಗಿ ವ್ಯಕ್ತಪಡಿಸಲು ಶಕ್ತವಾಗಿದೆ. ಹೊಸಯುಗದ ತವಕ ತಲ್ಲಣಗಳನ್ನು ತುಳುಭಾಷೆಯ ನಾಟಕಗಳು ತೆರೆದಿಡುತ್ತಾ ಬಂದಂತೆ ನವಮಾಧ್ಯಮಗಳ ಮೂಲಕ ಅದನ್ನು ಮತ್ತಷ್ಟೂ ಜೀವಂತವಾಗಿಡಲು ಸಿನಿಮಾಗಳಿಂದ ಸಾಧ್ಯವಾಗುತ್ತಿದೆ. ಈ ನಿಟ್ಟಿನಲ್ಲಿ ಅದಕ್ಕೆ ಬೇಕಾದ ಸಕಲ ಪ್ರಯತ್ನಗಳು ಬಹುನೆಲೆಗಳಲ್ಲಿ ನಡೆಯುತ್ತಿದೆ.

ಗ್ರಾಮೀಣ ಮತ್ತು ನಗರ ಜೀವನದ ಕುರಿತಂತೆ ನಿರೂಪಿಸುವ ಅನೇಕ ಕಥೆಗಳು ಬಹಳಷ್ಟು ತೆರೆಕಂಡಿವೆ. ಹಾಸ್ಯಕ್ಕೆ ವಿಪರೀತ ಒತ್ತು ಕೊಟ್ಟು ಸಿನೆಮಾ ಗೆಲ್ಲಿಸುವ ಪ್ರಯತ್ನಗಳು ಸಾಕಷ್ಟು ನಡೆದಿವೆ. ಉತ್ತಮ ಚಲನಚಿತ್ರಗಳಲ್ಲಿ ಅನುಭವಗಳ ಸಂವೇದನೆ, ಸಾಹಿತ್ಯದ ಒಲವು, ಕಥೆಯ ನಿರೂಪಣೆ, ವಾಸ್ತವಿಕ ವಿಷಯಾಧಾರಿತವಾಗಿ ಸಿನೆಮಾ ಯಶಸ್ಸು ಕಾಣುವುದು ಸಾಧ್ಯವಾಗಿದೆ.

ಕೆಲವು ಘಟನೆ, ಪ್ರಸಂಗಗಳ ನಿರೂಪಣೆಯ ಮೂಲಕ ಕೊಲಾಜ್ ಮಾದರಿಯ ಒಂದು ಆಕೃತಿಯಾಗಿ ಸಿನೆಮಾ ರೂಪುಗೊಳ್ಳುತ್ತದೆ. ಇವುಗಳಲ್ಲಿ ಕಥೆಗಿಂತ ನಿರೂಪಣೆಯಲ್ಲಿ ಹೆಚ್ಚು ಒತ್ತು ಇರುವುದನ್ನು ಗಮನಿಸಬಹುದು. ಅಂತಹ ನಿರೂಪಣೆಯ ಚಿತ್ರಕಥೆಯಲ್ಲಿ ರೂಪುಗೊಂಡ ಹಲವು ತುಳು ಸಿನೆಮಾಗಳು ಯಶಸ್ಸು ಕಂಡಿವೆ. ಮೊದಮೊದಲು ಬಂದಿರುವ ತುಳು ಸಿನೆಮಾಗಳು, ಕಥೆಯನ್ನೇ ಕೇಂದ್ರೀಕರಿಸಿ ತುಸು ಹಾಸ್ಯದೊಂದಿಗೆ ಚಿತ್ರಕಥೆಯ ರಚಿಸಿ ಸಿನೆಮಾ ನಿರ್ಮಾಣ ಮಾಡುತ್ತಿದ್ದರು. ಬದಲಾಗುತ್ತಾ ಈಗಿನ ತುಳು ಸಿನೆಮಾಗಳು ಹಾಸ್ಯವನ್ನೇ ಹೆಚ್ಚು ಬಳಸಿಕೊಂಡು ಚಿತ್ರದ ಕಥೆಯ ನಿರೂಪಣೆ ಸಾಗುತ್ತವೆ. ಇದು ತುಳುನಾಡ ಪ್ರೇಕ್ಷಕರ ಅಪೇಕ್ಷೆಯೂ ಆಗಿರಬಹುದು. ಆದರೆ ಹೆಚ್ಚು ಯಶಸ್ಸು ಪಡೆದಿರುವುದು ಗಟ್ಟಿತನದ ಸಂದೇಶದ ಹಾಸ್ಯ ಲೇಪನದೊಂದಿಗೆ ರಚಿತವಾಗಿರುವ ನಿರೂಪಣೆಯ ಚಿತ್ರಕಥೆಯುಳ್ಳ ಸಿನೆಮಾಗಳು.

ಹಾಗಾಗಿ ಸಿನೆಮಾಕ್ಕೆ ಕಥೆ ಮತ್ತು ಚಿತ್ರಕಥೆ ಅತೀ ಮುಖ್ಯವಾಗಿದೆ. ಈ ಸೂತ್ರ ಹಲವು ತುಳು ಸಿನೆಮಾಗಳನ್ನು ಗೆಲ್ಲಿಸಿ ಕೊಟ್ಟಿದೆ. ಹಾಗಾಗಿ ಒಂದು ಸಿನೆಮಾದ ಕಥೆಯ ಹುಟ್ಟು, ಚಿತ್ರಕಥೆಯ ರಚನೆ, ಸಂಭಾಷಣೆ, ಸಾಹಿತ್ಯ ಹೀಗೆ ನಾನಾ ಬಗೆಗಳು ಸಿನಿಮಾದ ಯಶಸ್ವಿಗೆ ಕಾರಣವಾಗಿವೆ.

# ಅನುಬಂಧ

## ಪ್ರಕಟಿತ ಆಯ್ದ ತುಳು ನಾಟಕಗಳು:

1. ಟೇಲರ್ ಕೆ.ಎನ್., (1968), ಕಲ್ಲ್‌ದ ದೇವೆರ್, ಜಯಂತಿ ಪಬ್ಲಿಕೇಶನ್ಸ್, ಮಂಗಳೂರು.
2. ಟೇಲರ್ ಕೆ.ಎನ್., (1974), ಯೇರ್ ಮಲ್ತಿನ ತಪ್ಪು, ಯಂ. ವೆಂಕಟರಾವ್, ಮಂಗಳೂರು.
3. ಟೇಲರ್ ಕೆ.ಎನ್., (1979), ಕಾಸ್‌ದಾಯೆ ಕಂಡನಿ, ಜಯಂತಿ ಪಬ್ಲಿಕೇಶನ್ಸ್, ಮಂಗಳೂರು.
4. ಟೇಲರ್ ಕೆ.ಎನ್., (1985), ಯಾನ ಸನ್ಯಾಸಿ ಆಪೆ, ಟೇಲರ್ ಕೆ.ಎನ್., ಮಂಗಳೂರು.
5. ವಿಶುಕುಮಾರ್, (1967), ಕೋಟಿಚೆನ್ನಯ, ವಿಶುಕುಮಾರ್, ಮಂಗಳೂರು.
6. ಸಂಜೀವ ದಂಡಕೇರಿ, (1969), ಗಂಗಾ ರಾಮ್, ಸಂಜೀವ ದಂಡಕೇರಿ, ಮಂಗಳೂರು.
7. ಸಂಜೀವ ದಂಡಕೇರಿ, (1998), ಬಯ್ಯಮಲ್ಲಿಗೆ, ಸಂಜೀವ ದಂಡಕೇರಿ, ಮಂಗಳೂರು.

## ತುಳು ನಾಟಕ ಆಧಾರಿತ ಆಯ್ದ ಚಲನಚಿತ್ರಗಳು:

1. ಗಂಗಾಧರ ಕಿರೋಡಿಯನ್ ಬಿ., (2017), ನೇಮದ ಬೂಳ್ಯ, ಕುದ್ರಾಡಿ ಕುಲದೇವತಾ ಕ್ರಿಯೇಷನ್ಸ್.
2. ಗೀತಪ್ರಿಯ, (1973), ಯಾನ್ ಸನ್ಯಾಸಿ ಆಪೆ, ಗಣೇಶ್ ಇಂಟರ್ ನ್ಯಾಷನಲ್ ಫಿಲಂಸ್.
3. ಆರೂರು ಪಟ್ಟಾಬಿ, (1972), ಬಿಸತ್ತಿ ಬಾಬು, ಮೈಕೋ ಫಿಲಂಸ್.
4. ಗೀತಪ್ರಿಯ, (1973), ಕಾಸ್‌ದಾಯೆ ಕಂಡನಿ, ಮೈತ್ರಿ ಫಿಲಂಸ್ ಮಂಗಳೂರು.
5. ರಿಚರ್ಡ್ ಕ್ಯಾಸ್ಟಲಿನೊ, (1993), ಬಂಗಾರ್ ಪಟ್ಲೆರ್, ರಾಜಲಕ್ಷ್ಮಿ ಫಿಲಂಸ್, ಮಂಗಳೂರು.
6. ಆರೂರು ಪಟ್ಟಾಭಿ, (1991), ಸತ್ಯ ಓಲುಂಡು, ಎಚ್. ಎಸ್. ಫಿಲಂಸ್.
7. ವಿಶ್ವನಾಥ ಪಿ.ಎಚ್., (1991), ತೆಲಿಕೆದ ಬೊಳ್ಳಿ, ಸೆಂಟ್ರಲ್ ಸಿನಿಮಾಸ್.
8. ರಾಜನ್ ಎಸ್.ಅರ್., (1971), ಎನ್ನ ತಂಗಡಿ, ಡಾಲಿ ಫಿಲಂಸ್.
9. ರಾಮ್ ಶೆಟ್ಟಿ, (1984), ದಾರೆದ ಸೀರೆ, ಆನಂದ ಫಿಲಂಸ್.
10. ವಿಶುಕುಮಾರ್, (1973), ಕೋಟಿಚೆನ್ನಯ, ಪ್ರಜಾ ಫಿಲಂಸ್.
11. ಆರೂರು ಪಟ್ಟಾಭಿ, (1974), ಬಯ್ಯಮಲ್ಲಿಗೆ, ಶ್ರೀ ಜಯರಾಮ ಫಿಲಂಸ್.
12. ಪದ್ಮನಾಭ, (1973), ಉಡಲ್ದ ತುಡರ್, ಕಲಾಕಿರಣ್ ಫಿಲಂಸ್, ಮಂಗಳೂರು.
13. ಕುಂಜಾಡಿ ಪ್ರೇಮನಾಥ ರೈ, (1998), ಒಂತೆ ಅಡ್ಜಸ್ಟ್ ಮಲ್ಪಿ, ಪದ್ಮ ಫಿಲಂಸ್.
14. ರಾಜಶೇಖರ್ ಹ.ಸೂ., (2011), ಒರಿಯರ್ದೊರಿ ಅಸಲ್, ರೂಪಲಕ್ಷ್ಮಿ ಫಿಲಂಸ್.

## ಪರಾಮರ್ಶನ ಗ್ರಂಥಗಳು:

1. ಅಮೃತ ಸೋಮೇಶ್ವರ, (2007), ತುಳುವ ಜಾನಪದ: ಕೆಲವು ನೋಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ತಮ್ಮ ಲಕ್ಷ್ಮಣ, (2022), ತುಳು ಬೆಳ್ಳಿತೆರೆಯ ಸುವರ್ಣ ಯಾನ, ದೃಶ್ಯ, ಮಂಗಳೂರು.
3. ಮಹಾಬಲೇಶ್ವರ ಕಾಟ್ರಹಳ್ಳಿ, (1993), ಸಾಹಿತ್ಯ ಮತ್ತು ಸಿನಿಮಾ, ಕರ್ನಾಟಕ ಸಾಹಿತ್ಯ ಕಾಡೆಮಿ, ಬೆಂಗಳೂರು.
4. ಮುದ್ದು ಮೂಡುಬೆಳ್ಳೆ, (2005), ತುಳು ರಂಗಭೂಮಿ, ಸಾಹಿತ್ಯ, ಸಂಸ್ಕೃತಿ ವೇದಿಕೆ ಬೆಳ್ಳೆ, ಮಂಗಳೂರು.
5. ವಿವೇಕ ರೈ ಬಿ.ಎ. (ಪ್ರ, ಸಂ), (2007), ತುಳು ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.